3) ಹಾಲು ಉತ್ಪನ್ನಗಳಿಗೆ ಕಡಿಮೆ ಮಾರುಕಟ್ಟೆ ದರಗಳಿರುವುದರಿಂದ.

ಈ) ಇಲ್ಲ.

ಉ) ಹೌದು.

ಬೆಂಗಳೂರು ಡೈರಿ ಹಾಲನ್ನು ಹೆಚ್ಚಿನ ದರದಲ್ಲಿ ಮಾರುತ್ತಿರುವುದರ ಬಗ್ಗೆ.

145 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಬೆಂಗಳೂರು ಡೈರಿ ಹಾಲನ್ನು ವಿಜೆಂಟರುಗಳು ಹಾಗೂ ಅಂಗಡಿಗಳವರು ಒಂದು ಲೀಟರ್‌ಗೆ 50 ಪೈಸೆ ಹೆಚ್ಚಿನ ದರದಲ್ಲಿ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಆ) *ಹಾಗಿದ್ದಲ್ಲಿ ಆ ರೀತಿ ಹೆಚ್ಚಿನ ದರದಲ್ಲಿ ಹಾಲನ್ನು ಮಾರುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.*

ಇ) *ರೆಫ್ರಿಜರೇಟರ್‌ನಲ್ಲಿ ಇಡಬೇಕಾಗಿರುವುದರಿಂದ, ಆ ರೀತಿ ಹೆಚ್ಚಿನ ದರವನ್ನು ತೆಗೆಮಕೊಳ್ಳಲಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ.*

ಈ) *ಹಾಗಿದ್ದಲ್ಲಿ ಕೆಲವು ವೇಳೆಯನ್ನು ಹೊರತು ಪಡಿಸಿ, ಮಿಕ್ಕ ವೇಳೆಗಳಲ್ಲಿ ಮಾರಲಿರುವ ಹಾಲಿಗೆ ಸ್ವಲ್ಪ ಹೆಚ್ಚಿನ ದರವನ್ನು ವಸೂಲು ಮಾಡಲು ಅನುಮತಿ ನೀಡುವ ಬಗ್ಗೆ ಪರಿಶೀಲಿಸಲಾಗುವುದೇ?*

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಹೆಚ್ಚಿನ ಬೆಲೆಗೆಹಾಲು ಮಾರಾಟ ಮಾಡುತ್ತಿದ್ದ ಕೆಲವು ಅಧಿಕೃತ ಮಾರಾಟಗಾರರಿಗೆ ದಂಡ ವಿಧಿಸಲಾಗಿದೆ.

ಇ) ಬಂದಿದೆ.

ಈ) ಹಾಲನ್ನು ಪ್ರತಿದಿನ ಎರಡು ವೇಳೆ ಅಂದರೆ ಬೆಳಿಗ್ಗೆ ಮತ್ತು ಮಧ್ಯಾಹ್ನ ಸರಬರಾಜು ಮಾಡುತ್ತಿರುವುದರಿಂದ ಇಂತಹ ಪ್ರಸ್ತಾವನೆ ಇರುವುದಿಲ್ಲ.

ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮದಲ್ಲಿ ಪಶು ಆರೋಗ್ಯ ಕೇಂದ್ರದ ಪ್ರಾರಂಭದ ಬಗ್ಗೆ

123 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ವಣ್ಣೂರು ಗ್ರಾಮಗಳಲ್ಲಿ ಪಶು ಆರೋಗ್ಯ ಕೇಂದ್ರ (ಆರ್.ವಿ.ಡಿ) ಪ್ರಾರಂಭಿಸಲು ಮಾನ್ಯ ಮುಖ್ಯಮಂತ್ರಿಗಳು ಪಶುಸಂಗೋಪನಾ ಇಲಾಖೆಯ ಕಾರ್ಯದರ್ಶಿಯವರಿಗೆ ಆದೇಶ ನೀಡಿದ ಸಂಗತಿ ನಿಜವೆ?*

ಆ) *ಹಾಗಿದ್ದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಆದೇಶದ ಪ್ರಕಾರ ಇಲ್ಲಿ ಆರ್.ವಿ.ಡಿ. ಪ್ರಾರಂಭಿಸಲು ಯಾರ ಕ್ರಮ ಕೈಗೊಳ್ಳಲಾಗಿದೆ?*

ಶ್ರಿ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.